ಆ) ಈ ಅವಧಿಯಲ್ಲಿ ನಿರ್ಮಿಸಿದ ಹೊಸ ಬಡಾವಣೆಗಳು ಆರು(6).

ಇ) ಇಲ್ಲ.

ಈ) ಅನ್ವಯಿಸುವುದಿಲ್ಲ.

ಜೈವಿಕ ಅನಿಲ ಘಟಕಗಳ ಸ್ಥಾಪನೆ

1150 (394); ಶ್ರೀ ಗೋಪಾಲಯ್ಯ ಕೆ.

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರತಕ್ಕ ವಾರ್ಡ್‌ಗಳ ಸಂಖ್ಯೆ ಎಷ್ಟು;

ಆ) ಈ ವಾರ್ಡ್‌ಗಳಲ್ಲಿನ ಪ್ರತಿದಿನ ಶೇಖರಣೆಯಾಗುವ ತ್ಯಾಜ್ಯದ ಪ್ರಮಾಣವೆಷ್ಟು;

ಇ) ಯಾವ ಯಾವ ವಾರ್ಡ್‌ಗಳಲ್ಲಿ ವಿದ್ಯುತ್ ಶಕ್ತಿ ಉತ್ಪಾದಿಸುವ ಜೈವಿಕ ಅನಿಲ ಘಟಕಗಳನ್ನು ಪ್ರಾರಂಭಿಸಲಾಗಿದೆ;

ಈ) ಇದರಿಂದ ಉತ್ಪಾದನೆಯಾಗುವ ವಿದ್ಯುತ್ ಪ್ರಮಾಣವೆಷ್ಟು;

ಉ) ಬೆಂಗಳೂರು ನಗರದ ಕಸದ ಸಮಸ್ಯೆ ಪರಿಹಾರಕ್ಕಾಗಿ ಎಲ್ಲಾ ವಾರ್ಡ್‌ಗಳಲ್ಲಿ ಈ ವಿದ್ಯುತ್ ಶಕ್ತಿ ಉತ್ಪಾದಿಸುವ ಜೈವಿಕ ಅನಿಲ ಘಟಕಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) 198

ಆ) ಈ ವಾರ್ಡ್‌ಗಳಲ್ಲಿ ಪ್ರತಿದಿನ ಸುಮಾರು 3500 ಸಾವಿರ ಮೆ.ಟನ್‌ಗಳಷ್ಟು ಘನತ್ಯಾಜ್ಯ ಉತ್ಪತ್ತಿಯಾಗುತ್ತಿದೆ.

ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 5 ಟನ್ ಸಾಮರ್ಥ್ಯದ (ಹಸಿತ್ಯಾಜ್ಯ) ಬಯೋಮೆಥನೇಷನ್ ಘಟಕದಿಂದ 300–500 ಯೂನಿಟ್ಸ್ ವಿದ್ಯುತ್‌ನ್ನು ಉತ್ಪಾದಿಸಬಹುದಾಗಿದೆ. ಬೃಹತ್

ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 5 ಟನ್ ಸಾಮರ್ಥ್ಯದ ಬಯೋಮೆಥನೈಜೇಷನ್ ಘಟಕಗಳನ್ನು ಈ ಕೆಳಕಂಡ ವಾರ್ಡ್‌ಗಳಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಈ ಘಟಕಗಳಿಂದ 5 ಟನ್ ಹಸಿತ್ಯಾಜ್ಯವನ್ನು ಸಂಸ್ಕರಣೆಗೆ ಒಳಪಡಿಸಿ ವಿದ್ಯುತ್ ಉತ್ಪಾದನೆ ಮಾಡಲಾಗುವುದು.

1) ವಾರ್ಡ್ ನಂ–11, ಕುವೆಂಪುನಗರ.

2) ವಾರ್ಡ್ ನಂ–35, ಅರಮನೆ ನಗರ (ಮತ್ತಿಕೆರೆ ಮುಖ್ಯರಸ್ತೆ)

3) ವಾರ್ಡ್ ನಂ–94, ಫ್ರೀಡಂಪಾರ್ಕ್, ಗಾಂಧೀನಗರ

4) ವಾರ್ಡ್ ನಂ–139, ಕೃಷ್ಣರಾಜೇಂದ್ರ ಮಾರ್ಕೆಟ್ ಆವರಣ.

5) ವಾರ್ಡ್ ನಂ–167, ಎ.ಸಿ.ಪಿ. ಕಛೇರಿ ಹತ್ತಿರ, ಜಯನಗರ.

6) ವಾರ್ಡ್ ನಂ–168, ಪಟ್ಟಾಭಿರಾಮನಗರ, ಜಯನಗರ.

7) ವಾರ್ಡ್ ನಂ–151, ಕೋರಮಂಗಲ.

8) ವಾರ್ಡ್ ನಂ–149, ಪಣತ್ತೂರು, ವರ್ತೂರು.

9) ವಾರ್ಡ್ ನಂ–192, ಬೇಗೂರು, ಗುಂಡುತೋಪು.

10) ವಾರ್ಡ್ ನಂ–191, ಕೆ.ಸಿ.ಡಿ.ಸಿ, ಕೂಡ್ಲು.

11) ವಾರ್ಡ್ ನಂ–198, ಲಿಂಗಧೀರನಹಳ್ಳಿ.

12) ವಾರ್ಡ್ ನಂ–67, ನಾಗಪುರ.

13) ವಾರ್ಡ್ ನಂ–112, ದೊಮ್ಮಲೂರು.

ಈ ಮೇಲಿನ ಸ್ಥಾವರಗಳಲ್ಲಿ 4 ಘಟಕಗಳಲ್ಲಿ (ವಾರ್ಡ್ ಸಂಖ್ಯೆ 11, 35, 139 ಮತ್ತು 167) ಕಾರ್ಯಾರಂಭ ಮಾಡಿದ್ದು, 3 ಘಟಕಗಳಲ್ಲಿ (ವಾರ್ಡ್ ಸಂಖ್ಯೆ 151, 94, 191) ಕಾಮಗಾರಿಯು

ಮುಕ್ತಾಯಗೊಂಡಿದ್ದು, ಇನ್ನುಳಿದ ಘಟಕಗಳ ಕಾಮಗಾರಿ ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ.

ಇದಲ್ಲದೇ ದೊಡ್ಡ ಪ್ರಮಾಣದ ತ್ಯಾಜ್ಯ ಉತ್ಪಾದಕರನ್ನು (ಹೊಟೇಲ್, ಕಲ್ಯಾಣ ಮಂಟಪಗಳು, ಮಾಲ್‌ಗಳು, ಬಹುಮಹಡಿ ಕಟ್ಟಡಗಳು, ವಿದ್ಯಾಸಂಸ್ಥೆಗಳು ಇತ್ಯಾದಿ) ಗುರುತಿಸಿ, ಅವರುಗಳಿಗೆ ತ್ಯಾಜ್ಯವನ್ನು ತಮ್ಮಲ್ಲಿಯೇ ಸಂಸ್ಕರಿಸುವಂತೆ ಉತ್ತೇಜಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಹೋಟೆಲ್ ಅಸೋಸಿಯೇಷನ್ ಗೆ ಪ್ರತಿದಿನ 250 ಟನ್ ಹಸಿ ಹೋಟಲ್ ತ್ಯಾಜ್ಯದಿಂದ ಜೈವಿಕ ಅನಿಲ ಉತ್ಪಾದಿಸುವ ಘಟಕ ಸ್ಥಾಪಿಸಲು ಪಾಲಿಕೆಯಿಂದ 5–0 ಎಕರೆ ಸ್ಥಳವನ್ನು ಉಪಯೋಗತಾ ಬದ್ಧತೆಯೊಂದಿಗೆ (permissive use) ಸರ್ವೆ ನಂ.85 ಕನ್ನಹಳ್ಳಿ, ದಾಸರಹಳ್ಳಿ ವಲಯ ಭಾಗದಲ್ಲಿ ನೀಡಲಾಗಿದೆ. ಸದರಿ ಘಟಕದಲ್ಲಿ ಉತ್ಪಾದನೆಗೊಳ್ಳುವ ಅನಿಲವನ್ನು ಇಂಧನ ರೂಪದಲ್ಲಿ ಬಳಕೆ ಮಾಡುವ ಉದ್ದೇಶವಿದ್ದು, ವಿದ್ಯುತ್ ಉತ್ಪಾದಿಸುವ ಪ್ರಸ್ತಾವನೆ ಇರುವುದಿಲ್ಲ.

ಈ) 5 ಟನ್ ಸಾಮರ್ಥ್ಯದ (ಹಸಿತ್ಯಾಜ್ಯ) ಬಯೋಮೆಥನೇಷನ್ ಘಟಕದಿಂದ 300–500 ಯೂನಿಟ್ಸ್ ವಿದ್ಯುತ್‌ನ್ನು ಉತ್ಪಾದಿಸಬಹುದಾಗಿದೆ. ಉತ್ಪತ್ತಿಯಾಗುವ ವಿದ್ಯುತ್‌ನ್ನು ಬೀದಿ ದೀಪಗಳಿಗೆ, ಪಾರ್ಕ್‌ಗಳಿಗೆ ಮತ್ತು ಮಾರ್ಕೆಟ್ ಪ್ರದೇಶಗಳಿಗೆ ಸರಬರಾಜು ಮಾಡಲಾಗುತ್ತಿದೆ.

ಉ) 5 ಟನ್ ಸಾಮರ್ಥ್ಯದ ಬಯೋಮೆಥನೇಷನ್ ಘಟಕವನ್ನು ಪ್ರಾಯೋಗಿಕವಾಗಿ 16 ಸ್ಥಳಗಳಲ್ಲಿ ಪ್ರಾರಂಭಿಸಿದ್ದು, ವಾರ್ಡ್‌ಗಳಲ್ಲಿ ಸ್ಥಳಾವಕಾಶ ಲಭ್ಯತೆ ಆಧಾರಿಸಿ ಹಾಗು ಈಗಾಗಲೇ ಸ್ಥಾಪಿಸಲಾಗುತ್ತಿರುವ ಪ್ರಾಯೋಗಿಕ ಘಟಕಗಳ ಕಾರ್ಯಕ್ಷಮತೆಯನ್ನು ಪರಿಗಣಿಸಿ, ಉಳಿದ ವಾರ್ಡ್‌ಗಳಲ್ಲಿ ಘಟಕಗಳನ್ನು ಸ್ಥಾಪಿಸಲಾಗುವುದು.